ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್.995/2023

| | | |
|---|---|---|
| ಸಾಕ್ಷಿಯ ಹೆಸರು | : ವೇಣುಗೋಪಾಲ | ಸಿ.ಡಬ್ಲ್ಯು 4 |
| ತಂದೆಯ ಹೆಸರು | : ಜಗನ್ನಾಥ್ | ಪಿ.ಡಬ್ಲ್ಯು 5 |
| ವಯಸ್ಸು | : 45 ವರ್ಷ | |
| ಉದ್ಯೋಗ | : ಪೋಲೀಸ್ ಮುಖ್ಯ ಪೇದೆ | |
| ವಾಸ ಸ್ಥಳ | : ತರೀಕೆರೆ | |

ದಿನಾಂಕಃ12.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2021 ರಿಂದ ಇಲ್ಲಿಯವರೆಗೆ ತರೀಕೆರೆಯಲ್ಲಿ ಪೋಲೀಸ್ ಮುಖ್ಯ ಪೇದೆ ಎಂದು ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ದಿನಾಂಕ 16.11.2022 ರಂದು ಸಂಜೆ 6 ಗಂಟೆಯ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಬೇಲೇನಹಳ್ಳಿ ತಾಂಡ್ಯದಲ್ಲಿ ಯಾವುದೋ ಒಬ್ಬ ಆಸಾಮಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿ ಚಾಸ-1 ರವರಿಗೆ ಬಂದಿತ್ತು. ಆ ಪ್ರಕಾರ ನಾನು, ಚಾಸ-4 ಮತ್ತು 6 ಚಾಸ-1 ರವರೊಂದಿಗೆ ದಾಳಿಗೆ ಹೋದೆವು. ಬೇಲೇನಹಳ್ಳಿಯಲ್ಲಿ ಚಾಸ-2 ಮತ್ತು 3 ಇವರನ್ನು ಪಂಚರನ್ನಾಗಿ ಕರೆದುಕೊಂಡೆವು. ಬೇಲೇನಹಳ್ಳಿ ರಸ್ತೆ ತಿರುವಿನಲ್ಲಿ ಒಬ್ಬ ವ್ಯಕ್ತಿಯು ಯಾವುದೋ ವಸ್ತುಗಳನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದು ಕಂಡು ಬಂದ ಕಾರಣ ಕೂಡಲೇ ದಾಳಿ ಮಾಡಿದೆವು. ಮಾರಾಟ ಮಾಡುತ್ತಿದ್ದ ವ್ಯಕ್ತಿ ನಮ್ಮನ್ನು ನೋಡಿ ಓಡಿ ಹೋದನು. ಚಾಸ-1 ರವರು ವಿಚಾರಿಸಿದಾಗ ಆತನ ಹೆಸರು ಚಂದ್ರಾನಾಯ್ಕ್ ಎಂದು ತಿಳಿಯಿತು. ಆತನು ಬಿಟ್ಟು ಹೋದ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಮ್.ಎಲ್ನ ಒಟ್ಟು 95 ಓಸಿ ಡಿಲಕ್ಸ್ ವಿಸ್ಕಿ ಟೆಟ್ರಾ ಪ್ಯಾಕೇಟುಗಳು ಇದ್ದವು. ಸದರಿ ಮದ್ಯವು ಅಕ್ರಮವಾಗಿ ಮಾರಾಟ ಮಾಡಲು ತಂದಿರುವ ಮದ್ಯ ಎಂದು ತಿಳಿದುಕೊಂಡು ಚಾಸ-1 ರವರು ಪಂಚನಾಮೆಯ ಮೂಲಕ ಮದ್ಯವನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಅ ದಿನ ಓಡಿ ಹೋದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇದ್ದಾನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಮು.ಮಾ 1 ರಂತಹ ಮದ್ಯದ ಪೌಚುಗಳು ಎಲ್ಲಾ ಬಾರುಗಳಲ್ಲಿ ಸಾಮಾನ್ಯವಾಗಿ ಸಿಗುತ್ತವೆ ಎಂದರೆ ನಾನು ಬಾರಿಗೆ ಹೋಗುವುದಿಲ್ಲ. ನಾನು ಚಾಸ-1 ರವರೊಂದಗೆ ಯಾವುದೇ ದಾಳಿಗೆ ಹೋಗಿಲ್ಲ, ಚಾಸ-1 ರವರು ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಅಕ್ರಮ ಮದ್ಯವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸ-1 ನನ್ನ ಮೇಲಾಧಿಕಾರಿ ಎಂದರೆ ಸರಿ. ಅವರು ಹೇಳಿದ ಹಾಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯ ಅಂಕಿ-ಸಂಖ್ಯೆಗೋಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನಾನು ಪಂಚನಾಮೆಗೆ ಸಹಿ ಮಾಡಿರುವುದಿಲ್ಲ. ಚಾಸ-2 ಮತ್ತು 3 ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.